**ಪಿ.ಡಬ್ಲ್ಯೂ-4**

ದಿನಾಂಕಃ **15-01-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಶ್ರೀ ಜೆ.ಕೆ.ಕೆ. ವಕೀಲರಿಂದಃ-

ಶೇಖರೇಗೌಡನ ತಂದೆಯ ಹೆಸರು ರಂಗೇಗೌಡ. ರಂಗೇಗೌಡನಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನು ಒಟ್ಟು ಕುಟುಂಬದ ಆಸ್ತಿ ಎಂದರೆ ಗೊತ್ತಿಲ್ಲ. ಈ ದಾವಾಸ್ತಿಯ ದಾಖಲೆಗಳನ್ನು ನನ್ನ ಅಳಿಯ ಮೋಹನರಾಜ್ ನೋಡಿರುತ್ತಾರೆ. ಮೊದಲು ಮೋಹನ್ ರಾಜ್ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಕರಾರು ಪತ್ರ ಆಗುವ ಮೊದಲು ನಾನು ಸ್ಥಳಕ್ಕೆ ಹೋಗಿ ಚೆಕ್ ಬಂಧಿಯನ್ನು ಮತ್ತು ಸರ್ವೆ ನಂಬರ್ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ ಭಾಗಾಯ್ತು ಜಮೀನು. ಅದು 1 ಗುಂಟೆ 80 ರಿಂದ 90 ಸಾವಿರ ರೂ. ಬೆಲೆ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹಿರಿಯ ಮಗ ಎಂದರೆ ಸರಿ. ಆ ಕಾರಣದಿಂದ ಅವರೇ ಮನೆಯ ವ್ಯವಹಾರಗಳನ್ನು ನೋಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹಿರಿಯ ಮಗನಾಗಿದ್ದರಿಂದ ರಂಗೇಗೌಡ ನ ಮರಣದ ನಂತರ ಆತನ ಹೆಸರಿಗೆ ಫವತಿ ಖಾತೆ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪಹಣಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ಅಳಿಯನಿಗೆ ಗೊತ್ತು ಎಂದು ನುಡಿಯುತ್ತಾರೆ. ಈ ದಾವೆಯ ಎಲ್ಲಾ ವಿಚಾರ ವಿದ್ಯಾಮಾನಗಳು ನನಗೆ ಗೊತ್ತಿಲ್ಲ ನನ್ನ ಅಳಿಯನಿಗೆ ಗೊತ್ತು ಎಂದರೆ ಸರಿ. ಕ್ರಯದ ಕರಾರು ಪತ್ರವನ್ನು ಬರೆಯಲು ನನ್ನ ಅಳಿಯನೇ ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ 1 ನೇ ಪ್ರತಿವಾದಿ ಕೊಟ್ಟಿರುತ್ತಾರೆ. ರಂಗೇಗೌಡರಿಗೆ ರಾಧಮ್ಮ, ವಸಂತಮ್ಮಮತ್ತು 1 ಮತ್ತು 2 ನೇ ಪ್ರತಿವಾದಿಯರು ಮಕ್ಕಳು ಎಂದರೆ ಸಾಕ್ಷಿ ಪ್ರತಿವಾದಿಯರ ಬಗ್ಗೆ ಗೊತ್ತು ಉಳಿದವರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕರಾರು ಪತ್ರ ಆಗುವ ಸಮಯದಲ್ಲಿ ಪ್ರತಿವಾದಿಯರ ವಂಶವೃಕ್ಷ ಕೊಡುವಂತೆ ಕೇಳಿದರೆ ಅವರು ಕ್ರಯಪತ್ರ ಬರೆಸಿಕೊಡುವ ಸಮಯದಲ್ಲಿ ಕೊಡುತ್ತೇವೆ ಎಂದು ಹೇಳಿದರು. ಸದರಿ ವಿಷಯವನ್ನು ಕರಾರು ಪತ್ರದಲ್ಲಿ ಬರೆಸಿರುವುದಿಲ್ಲ. ಕರಾರು

ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸ್ಟಾಂಪ್ ಪೇಪರ್ ನ್ನು ತಂದಿದ್ದು ಡಿ.ಟಿ. ಮಧು ಎನ್ನುವವರು ಅದನ್ನು ತಯಾರಿಸಿರುತ್ತಾರೆ. ಕರಾರು ಪತ್ರ ಆದ ದಿನ ಯಾವುದೇ ಮುಂಗಡ ಹಣ ಕೊಟ್ಟಿಲ್ಲ ಅದಕ್ಕಿಂತ ಮುಂಚೆ ಕೊಟ್ಟಿರುತ್ತೇವೆ. ಯಾವ ದಿನಾಂಕದಂದು ಕೊಟ್ಟಿದ್ದೇವೆ ಎಂದು ನೆನಪಿಲ್ಲ ಆದರೆ 3 ತಿಂಗಳ ಮುಂಚೆ ಕೊಟ್ಟಿರುತ್ತೇವೆ. ಸದರಿ ವಿಷಯವನ್ನು ಕರಾರು ಪತ್ರದಲ್ಲಿ ಬರೆಸಿರುವುದಿಲ್ಲ ಏಕೆಂದರೆ 1 ನೇ ಪ್ರತಿವಾದಿಯೇ ಹೇಳಿ ಬರೆಸಿರುತ್ತಾರೆ. ಮುಂಗಡ ಹಣ 7 ಲಕ್ಷ ರೂ.ಗಳನ್ನು ನಮ್ಮ ಮನೆಯಲ್ಲಿ ಕೊಟ್ಟಿರುತ್ತೇವೆ. 1 ಲಕ್ಷ ಹಣವನ್ನು ಕರಾರು ಪತ್ರ ಆದ ಮಾರನೇ ದಿನ ಬೆಳಗ್ಗೆ ಕೊಟ್ಟಿರುತ್ತೇವೆ. ಕರಾರು ಪತ್ರದಲ್ಲಿ 1 ಲಕ್ಷ ಹಣವನ್ನು ನೊಂದಣಿ ಸಮಯದಲ್ಲಿ ಕೊಡುತ್ತೇವೆಂದು ಬರೆಯಲಾಗಿದೆ ಎಂದರೆ ಸರಿ. ಏಕೆಂದರೆ ಪ್ರತಿವಾದಿಯರು ತಮಗೆ ಅಡಚಣೆ ಇದೆ ಬೇಕು ಎಂದು ಹೇಳಿದ್ದಕ್ಕೆ ಕರಾರು ಪತ್ರ ಆದ ಮಾರನೇ ದಿನ 1 ಲಕ್ಷ ರೂ. ಕೊಟ್ಟಿರುತ್ತೇವೆ. ಆ ಹಣವನ್ನು ಚೆಕ್ ಮೂಲಕ ಕೊಟ್ಟಿರುತ್ತೇನೆ ಆ ವ್ಯಕ್ತಿ ಹಣ ಕೊಟ್ಟ ಬಗ್ಗೆ ಕರಾರು ಪತ್ರದಲ್ಲಿ ಷರಾ ಬರೆಸಿ ಪ್ರತಿವಾದಿಯರ ಸಹಿ ಪಡೆದಿರುವುದಿಲ್ಲ ಮತ್ತು ರಶೀದಿಯನ್ನು ಪಡೆದಿಲ್ಲ. ಯಾವ ದಿನಾಂಕದಂದು ಮುಂಗಡವಾಗಿ 7 ಲಕ್ಷ ರೂ. ಕೊಟ್ಟ ಬಗ್ಗೆ ನನ್ನ ದಾವೆಯಲ್ಲಾಗಲೀ, ನೋಟೀಸಿನಲ್ಲಾಗಲೀ ನಮೂದಿಸಿಲ್ಲ ಎಂದರೆ ಸರಿ. 7 ಲಕ್ಷ ರೂ. ಗಳನ್ನುಕೊಡುವ ಸಮಯದಲ್ಲಿ ರಂಗಸ್ವಾಮಿ, ಮೋಹನರಾಜು, 1 ಮತ್ತು 2 ನೇ ಪ್ರತಿವಾದಿಯರು ಹಾಗೂ ನಾನು ಇದ್ದೆವು. ಅ ಸಮಯದಲ್ಲಿ ನಂಬಿಕೆ ಇದಿದ್ದರಿಂದ ಯಾವುದೇ ದಾಖಲೆ ಬರೆಸಿಕೊಂಡಿಲ್ಲ. ಈ ರೀತಿ ನಂಬಿಕೆ ಮೇರೆಗೆ ಹಣ ಕೊಟ್ಟಿರುತ್ತೇನೆಂದು ಕರಾರು ಪತ್ರದಲ್ಲಿ ಬರೆಸಿರುವುದಿಲ್ಲ. ಕರಾರು ಪತ್ರ ಆಗುವ ಸಮಯದಲ್ಲಿ ನಾನು ದಾವಾ ಆಸ್ತಿಯ ಪಹಣಿಯನ್ನು ನೋಡಿರುವುದಿಲ್ಲ. ಪಹಣಿ ಪತ್ರಿಕೆ 1 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ಆದರೆ ಅದನ್ನು ನನ್ನ ಅಳಿಯನೇ ನೋಡಿರುತ್ತಾರೆ. ನನ್ನ ಅಳಿಯ ಸಹಿ ಮಾಡು ಎಂದು ಹೇಳಿದ್ದಕ್ಕೆ ಕರಾರು ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ದುರಸ್ತಾಗಿ ಅವರ ಹೆಸರಿಗೆ ಪಹಣಿ ಪತ್ರಿಕೆ ಆದ ನಂತರ ಕ್ರಯಪತ್ರ ಬರೆಸಿಕೊಡುತ್ತೇವೆಂದು ಕರಾರು ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ಬರೆದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **15-01-2025.**